
ಸುರೇಶ ನಾಗಲಮಡಿಕೆ

# ಏಕತಾರಿಯ ನಾದ ಹಿಡಿದು...




**ಏಕತಾರಿ**
(ಕಥಾಸಂಕಲನ)
ಲೇ: ಚನ್ನಪ್ಪ ಕಟ್ಟಿ
ಪು: 130, ಬೆಲೆ: ₹ 120
ಪ್ರ: ಪಲ್ಲವ ಪ್ರಕಾಶನ,
ಚನ್ನಪಟ್ಟಣ ಅಂಚೆ,
ವಯಾ – ಎಮ್ಮಿಗನೂರ,
ಬಳ್ಳಾರಿ – 583 113

ಕತೆಗಾರನಿಗೆ ಬದುಕಿನ ಹಲವು ಮುಖಗಳನ್ನು ಶೋಧಿಸಲು ಏನೆಲ್ಲಾ ದಿಕ್ಕುಗಳು ಇರಬಲ್ಲವು ಎಂಬುದಕ್ಕೆ ಚನ್ನಪ್ಪ ಕಟ್ಟಿಯವರ ಪ್ರಸ್ತುತ ಸಂಕಲನ 'ಏಕತಾರಿ'ಯ ಕೆಲವು ಕತೆಗಳು ನಿದರ್ಶನವಾಗಿವೆ. ಜನಪದ ಲೋಕದೃಷ್ಟಿಯ ವರ್ತಮಾನದ ವಿಶಿಷ್ಟ ಅಸಂಗತ ಸ್ಥಿತಿಯನ್ನು ಅನುಭವಿಸುವ ಪಾತ್ರಗಳು ಇಲ್ಲಿನ ಕತೆಗಳಲ್ಲಿ ಭೇಟಿಯಾಗುತ್ತವೆ. ಕಟ್ಟಿ ಇಂಗ್ಲಿಷ್ ಅಧ್ಯಾಪಕರು. ಇಂಗ್ಲಿಷ್ ಸಾಹಿತ್ಯದ ಓದಿನಿಂದ ತಂತ್ರ, ಶೈಲಿ ಮತ್ತು ಉತ್ತರ ಕರ್ನಾಟಕದ ರೂಪಾತ್ಮಕ ನುಡಿಗಟ್ಟುಗಳನ್ನು ಕಟ್ಟಿ ತಮ್ಮ ಕತೆಗಳಲ್ಲಿ ಒಳಗುಮಾಡಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಭಾಷೆ ಎಂದೊಡನೆ ಒಂದೇ ದಾರಿಯಲ್ಲಿ ಸಾಗಿ ಆ ಭಾಗದ ಲೇಖಕರನ್ನು ಅಳೆಯುವ ಪರಿಪಾಠವಿದೆ. ಈ ಸಿದ್ಧ ಪರಿಪಾಠ ಕಟ್ಟಿಯವರ ಕತೆಗಳಿಗೆ ಸಂಬಂಧಿಸಿದಂತೆ ನಮ್ಮನ್ನು ದಿಕ್ಕು ತಪ್ಪಿಸಬಹುದು.

ಕಟ್ಟಿಯವರ ಕತೆಗಳ ತಂತ್ರ ಮತ್ತು ಬದುಕುಗಳ ಒಳನೇಯ್ಗೆಗಳ ಸೂಕ್ಷ್ಮಗಳನ್ನು ಗಮನಿಸಿದರೆ ಹಲವು ವಿಷಯಗಳು ಮನದಟ್ಟಾಗುತ್ತವೆ. ಮನುಷ್ಯ ಸಂಬಂಧಗಳ ಸಂಕೀರ್ಣ ನೇಯ್ಗೆಗಳನ್ನು ಅರಿಯಲು ಕತೆಗಾರನಿಗೆ ಯಾವಾಗಲೂ ನಿಕಟವಾದ ಗಮನಿಸುವಿಕೆ ಅನಿವಾರ್ಯ. ಇಲ್ಲಿನ ಕತೆಗಳ